ಮಾತಾಡಿಕೊಳ್ತಿದ್ದಾರಂತೆ. ಈ ಊರು ಕಟ್ಟಿ ನಾನ್ನೂರು ವರ್ಷಗಳಾಗಿವೆ ಅಂತಾರೆ. ಸರಿಯಾಗಿ ಯಾರಿಗೂ ಗೊತ್ತಿಲ್ಲ. 1850ರಲ್ಲಿ ಇಲ್ಲಿ ಮೂವತ್ತು ಮನೆಗಳಿದ್ದವಂತೆ! ಈಗ ಮುನ್ನೂರೈವತ್ತು ಮನೆಗಳಾಗಿವೆ. ಮೊದಲು ಈ ಊರಲ್ಲಿ ಯಾರಿದ್ದರು? ನಂತರ ಬಂದವರು ಯಾರು ಅಂತ ಈಗ ಕೇಳಿದರೆ ಉತ್ತರ ಹೇಳೋಕೆ ಯಾರಿಂದಲೂ ಸಾಧ್ಯವಿಲ್ಲ.

ಅಪ್ಪ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ಬಳ್ಳಾರಿ ಜೈಲಲ್ಲಿ ಮೂರು ತಿಂಗಳು ಶಿಕ್ಷೆ ಅನುಭವಿಸಿದ್ದರು. ಅದು ಇಡೀ ಜಿಲ್ಲೆಗೆ ಗೊತ್ತಿದೆ. ಅವರು ಯಾವುದೋ ದೇಶದವರಾಗಿದ್ದರೆ ನಮ್ಮ ದೇಶಕ್ಕಾಗಿ ಜೈಲಿಗೆ ಹೋಗ್ತ ಇರಲಿಲ್ಲ. ಇಮಾಂ ಸಾಬರನ್ನು ನೋಡಿದ್ದ ಅನೇಕರು ಇನ್ನೂ ಬದುಕಿದ್ದಾರೆ. ಅವರಿಗೆಲ್ಲ ಅಪ್ಪ ಎಂಥವರು ಅನ್ನೋದು ಗೊತ್ತಿದೆ' ಅಂತ ಸೌಮ್ಯವಾಗಿ, ಧ್ವನಿಯಲ್ಲಿ ಏರಿಳಿತ ಇಲ್ಲದೆ ಹೇಳಿ ಕೆಲವು ಕ್ಷಣಗಳು ಸುಮ್ಮನಿದ್ದು, 'ಇದಕ್ಕಿಂತ ಹೆಚ್ಚು ನನಗೇನೂ ಗೊತ್ತಿಲ್ಲ' ಅಂದ. ನನ್ನ ಮಾತು ಮುಗಿಯಿತು ಎನ್ನುವಂತೆ ಎಲ್ಲರಿಗೂ ಮತ್ತೆ ಕೈಮುಗಿದ.

ಆಮೇಲೆ ಏನು ಕೇಳಬೇಕು ಅನ್ನುವುದು ಗೊತ್ತಾಗದೆ ಸಭೆಯಲ್ಲಿ ಕೆಲವು ಕ್ಷಣಗಳ ಮೌನ ನೆಲೆಸಿತು. ಮುಂದೇನು ಕೇಳಬೇಕು ಅನ್ನೋದು ಪ್ರೆಸಿಡೆಂಟರಿಗೂ ಹೊಳೆಯಲಿಲ್ಲ. ಅಲ್ಲಿಯವರೆಗೆ ಸುಮ್ಮನೆ ಕೂತಿದ್ದ ಗುಡಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರು, 'ನನ್ನದೊಂದು ಪ್ರಶ್ನೆಗೆ ನೀನು ಉತ್ತರ ಹೇಳಿದರೆ ಸಾಕು' ಅಂತ ಏಕವಚನದಲ್ಲಿ ಮೊದೀನ್ ಕಡೆ ನೋಡುತ್ತ ಕೇಳಿದರು.

ಅವರು ಪ್ರಶ್ನೆ ಕೇಳಿದ್ದು ಸಭೆಯಲ್ಲಿದ್ದ ಅನೇಕರಿಗೆ ಇಷ್ಟವಾಗಲಿಲ್ಲ.

'ಅಲ್ಲಯ್ಯಾ ನಿನ್ನ ವಯಸ್ಸೇನು, ಮೊದೀನ್ ಸಾಬರ ವಯಸ್ಸೇನು? ಊರವರೆಲ್ಲ ಅವರಿಗೆ ಗೌರವ ಕೊಟ್ಟು ಸುಮ್ಮನೇ ಕೂತಿರೋದು ಕಾಣ್ತಿಲ್ಲವೇ' ಅಂತ ಟಿವಿಎಸ್ ರಾಮಣ್ಣ ಇದ್ದಕ್ಕಿದ್ದಂತೆ ಏರಿದ ಧ್ವನಿಯಲ್ಲಿ ಗದರಿದರು.

'ಎಲ್ಲಿಂದಲೋ ಬಂದ ತಿರುಬೋಕಿಗಳು ನಮ್ಮೂರಲ್ಲಿ ಪಾರುಪತ್ಯ ಮಾಡದನ್ನು ಕೂತ್ಗಂಡು ನೋಡೋ ಗತಿ ನಮಗೆ ಬಂತು...' ಅಂತ ಇನ್ನೂ ದೊಡ್ಡ ಧ್ವನಿಯಲ್ಲಿ ರಾಮಣ್ಣ ಗದರಿಸಿದರು. ಅವರ ಧ್ವನಿ ಮಾತ್ರವಲ್ಲ ದೇಹವೂ ಸಣ್ಣಗೆ ಕಂಪಿಸುತ್ತಿತ್ತು.

'ನೀನು ಕೊಡೋ ಪುಟುಗೋಸಿ ಹತ್ತು ಲಕ್ಷ ರೂಪಾಯಿಗೆ ನಿನ್ನ ಮಾತು ಕೇಳಬೇಕಾ... ಆ ದುಡ್ಡನ್ನು ನಾನೇ ಕೊಡ್ತೀನಿ' ಅಂತ ಕೋಪದಿಂದ ಹೇಳಿದರಲ್ಲದೆ, 'ನಮ್ಮ ಮಾತಿಗೆ ಬೆಲೆ ಇಲ್ಲ ಅಂದ ಮೇಲೆ ನಾನು ಇಲ್ಲಿ ಇರಲ್ಲ...' ಅಂತ ರಾಮಣ್ಣ ಹೇಳುತ್ತ ಎದ್ದು ಹೊರಟೇಹೋದರು. ಅವರನ್ನು ಸಮಾಧಾನಪಡಿಸಲು ಸಭೆಯಲ್ಲಿದ್ದವರಿಗೆ ಆಗಲಿಲ್ಲ. ರಾಮಣ್ಣ ಹೋಗುತ್ತಿದ್ದಂತೆ ಪ್ರೆಸಿಡೆಂಟರೂ ಸಭೆಯಿಂದ ಹೊರಡಲು ಎದ್ದು ನಿಂತರು. ಆಗ ಅಲ್ಲಿದ್ದವರು ಅವರನ್ನು ತಡೆದರು. ಕೈಮುಗಿದು, ಕೈಹಿಡಿದು ಒತ್ತಾಯದಿಂದ ಕೂರಿಸಿದರು.

'ಮೊದೀನ್ ಸಾಬರನ್ನು ಏಕವಚನದಲ್ಲಿ ಪ್ರಶ್ನೆ ಕೇಳಿದ್ದು ನಮಗೆ ಇಷ್ಟವಾಗಲಿಲ್ಲ. ಮೊದಲು ನೀವು ಅವರ ಕ್ಷಮೆ ಕೇಳಬೇಕು' ಅಂತ ಪ್ರೆಸಿಡೆಂಟರೂ ಸೇರಿದಂತೆ ಅನೇಕರು ಗುಡಿ ಸಮಿತಿ ಅಧ್ಯಕ್ಷರನ್ನು ಒತ್ತಾಯಿಸಿದರು.

ಅವಮಾನದಿಂದ ಪೆಚ್ಚಾಗಿ, ಮುಖ ಸಣ್ಣಗೆ ಮಾಡಿಕೊಂಡು ಕೂತಿದ್ದ ಸಮಿತಿ ಅಧ್ಯಕ್ಷರು ಗಂಭೀರ ಧ್ವನಿಯಲ್ಲಿ ಕ್ಷಮೆ ಕೇಳಿದರು. ಕೆಲವು ಕ್ಷಣಗಳು ಸುಮ್ಮನಿದ್ದು, 'ಮೊದೀನ್ ಸಾಹೇಬರೇ ನಿಮಗೆ ನಮ್ಮ ಧರ್ಮ, ದೇವರುಗಳ ಬಗ್ಗೆ ಗೌರವ ಇಲ್ಲ ಅಂತ ಊರಿನ ಕೆಲವರು ನಮಗೆ ಹೇಳಿದರು. ಅದಕ್ಕೆ ನೀವೇನು ಹೇಳ್ತೀರಿ...' ಅಂತ ಕೇಳಿದರು.

ಮೊದೀನ್ ಎದ್ದು ನಿಂತ. 'ಸದ್ಯ, ಈ ಮಾತನ್ನು ನಮ್ಮೂರವರು ಕೇಳಲಿಲ್ಲ. ಅದು ನನ್ನ ಪುಣ್ಯ. ನಂಗೆ, ನನ್ನ ಕುಟುಂಬದವರಿಗೆ ನಮ್ಮ ದೇವರು ಬೇರೆ, ನಿಮ್ಮ ದೇವರು ಅಂತ ಗೊತ್ತಿಲ್ಲ... ಎಲ್ಲ